5. M/s ಹರಿವಂತ್ ಕಂಪನಿ ಲಿಮಿಟೆಡ್ ತನ್ನ ವಸ್ತು 'X'ಯನ್ನು 8,000 ಯೂನಿಟ್‌ಗಳಷ್ಟು ತಯಾರಿಸಿ ಸಗಟು ವ್ಯಾಪಾರಿಗೆ ಪ್ರತಿ ಯೂನಿಟ್‌ಗೆ 20 ರಂತೆ ಮಾರಾಟ ಮಾಡುತ್ತದೆ. ಇದು 'Y' ವಸ್ತುವನ್ನು ಕೂಡಾ ತಯಾರಿಸಿ 3000 ಯೂನಿಟ್‌ಗಳನ್ನು ಪ್ರತಿಯೊಂದಕ್ಕೆ ₹ 15 ರಂತೆ ವ್ಯಾಪಾರಿಗೆ ಮಾರಾಟ ಮಾಡುತ್ತದೆ. ಸಗಟು ವ್ಯಾಪಾರಿಗೆ ಸಹಜ ಅಭ್ಯಾಸದಂತೆ 10% ವ್ಯಾಪಾರ ಸೋಡಿಯನ್ನು ನೀಡಲಾಗುವುದು. ಪ್ಯಾಕಿಂಗ್ ಹಾಗೂ ಸಾಗಾಣಿಕಾ ವೆಚ್ಚ ₹12,000 ಪ್ರತ್ಯೇಕವಾಗಿ ವಿಧಿಸಲಾಗುವುದು. GST ಯ ದರ 18% ಆಂದರೆ ಪಾವತಿಸಬೇಕಾದ GST ಯ ಮೊತ್ತವನ್ನು ಕಂಡುಹಿಡಿಯಿರಿ. ಪೂರೈಕೆಯನ್ನು ರಾಜ್ಯದೊಳಗಿನ ಪೂರೈಕೆ ಎಂದು ಪರಿಗಣಿಸುವುದು.

6. ಈ ಕೆಳಕಂಡ ವಿವರಗಳಿಂದ, ಬೆಂಗಳೂರಿನಲ್ಲಿ ನೋಂದಾಯಿಸಿದ ವ್ಯಾಪಾರಿಯು ಎಷ್ಟು GST ಸಂದಾಯ ನೀಡಬೇಕಾಗುತ್ತದೆ ಎಂಬುದನ್ನು ತಿಳಿಸಿ. ಈ ಕೆಳಗಿನ ವ್ಯವಹಾರಕ್ಕೆ 12% ರಷ್ಟು GST ದರ ಅನ್ವಯಿಸುತ್ತದೆ.
   a) ಬಂಗಾರಪೇಟೆಯ ನೋಂದಾಯಿತ ವರ್ತಕನಿಗೆ ಮಾರಿದ ಮಾರಾಟ ಮೌಲ್ಯ ₹ 7,00,000
   b) ಕೋಲಾರದ ನೋಂದಾಯಿತ ವರ್ತಕನಿಗೆ ಮಾರಿದ ಮಾರಾಟ ಮೌಲ್ಯ ₹ 3,00,000
   c) ಮಾಲೂರಿನ ಶಾಖೆಗೆ ಸರಕನ್ನು ವರ್ಗಾಯಿಸಿದ ಮೌಲ್ಯ ₹ 1,00,000

   ವ್ಯಾಪಾರಿಗಳು ಈ ಕೆಳಕಂಡಂತೆ ಸರಕನ್ನು ಹಿಂತಿರುಗಿಸಿರುತ್ತಾರೆ :
   a) ಬಂಗಾರಪೇಟೆಯ ವ್ಯಾಪಾರಿಯು ₹ 80,000 ಮೌಲ್ಯದ ಸರಕನ್ನು ಒಂದು ತಿಂಗಳ ಒಳಗಾಗಿ ಹಿಂತಿರುಗಿಸಿರುತ್ತಾರೆ.
   b) ಕೋಲಾರದ ವ್ಯಾಪಾರಿಯು ₹ 20,000 ಮೌಲ್ಯದ ಸರಕನ್ನು 8 ತಿಂಗಳ ನಂತರ ಹಿಂತಿರುಗಿಸಿರುತ್ತಾರೆ.

## ವಿಭಾಗ – ಸಿ

ಯಾವುದಾದರೂ **3** ಪ್ರಶ್ನೆಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ **14** ಅಂಕಗಳು. **(3×14=42)**

7. a) GSP Eco ಪದ್ಧತಿ ಬಗ್ಗೆ ಟಿಪ್ಪಣಿ ಬರೆಯಿರಿ, ಮತ್ತು
   b) GST ಮಂಡಳಿ ಎಂದರೇನು ? GST ಮಂಡಳಿಯ ರಚನೆ, ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿ.

8. CGST ಕಾಯ್ದೆ 2017 ರ ಸಾಮಾನ್ಯ ಲಕ್ಷಣಗಳನ್ನು ವಿವರಿಸಿ.

9. ಈ ಕೆಳಗಿನ ಮಾಹಿತಿಗಳಿಂದ ತೆರಿಗೆ ಜಾಲಕ್ಕೆ ರವಾನಿಸುವ ಉತ್ಪಾದನಾ ತೆರಿಗೆಯನ್ನು ಒಬ್ಬ ಕರ್ನಾಟಕದ ವ್ಯಾಪಾರಿಯು ಜನವರಿ ತಿಂಗಳಿನಲ್ಲಿ ಸಲ್ಲಿಸಬೇಕಾಗಿರುವ ಮೊತ್ತವನ್ನು ಕಂಡುಹಿಡಿಯಿರಿ. ಜನವರಿ ತಿಂಗಳು ಲೆಕ್ಕಕ್ಕೆ ಜಮಾ ಮಾಡಲು ಕೊನೆಯ ದಿನಾಂಕವಾಗಿರುತ್ತದೆ.

| ಕ್ರಮ ಸಂಖ್ಯೆ | ವಿವರಗಳು |
|---|---|
| 1 | 'A' ಸರಕನ್ನು ಬೆಂಗಳೂರಿನ ಒಬ್ಬ ವ್ಯಾಪಾರಿಗೆ ಶೇಕಡ 18 ರ GST ದರದಲ್ಲಿ ಮಾರಿರುವುದು ₹ 4,00,000. |
| 2 | 'B' ಸರಕನ್ನು ಮೈಸೂರಿನ ವ್ಯಾಪಾರಿಗೆ ಶೇಕಡ 12 ರ GST ದರದಲ್ಲಿ ಮಾರಿರುವುದು ₹ 1,40,000. |
| 3 | 'C' ಸರಕನ್ನು ಪುದುಚೇರಿಯ ವ್ಯಾಪಾರಿಗೆ GST ಶೂನ್ಯದಲ್ಲಿ ಮಾರಿರುವುದು ₹ 5,00,000. |